# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ:ಎಡಿಸ್ ಆರ್.ಆರ್.ಟಿ.ಎಸ್.ಆರ್: 145/15-16

ದಿನಾಂಕ 25 -10-2016.

ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಶ್ರೀ ಗಣೇಶ್ ಪ್ರಸಾದ್<br>ಬಿನ್ ಮುದರ ಗೌಡ,<br>ದಿಡ್ವ ಮನೆ, ಚಿಬಿದ್ರೆ ಗ್ರಾಮ ಮತ್ತು ಅಂಚೆ,<br>ಬೆಳ್ತಂಗಡಿ ತಾಲೂಕು ದ.ಕ.<br>(ನ್ಯಾಯವಾದಿ ಶ್ರೀ ಶಿವಯ್ಯ ಎಸ್.ಎಲ್) | - ಮತ್ತು - | 1. ಕಂದಾಯ ನಿರೀಕ್ಷಕರು<br>ಕೊಕ್ಕಡ ಹೋಬಳಿ,<br>ಬೆಳ್ತಂಗಡಿ ತಾಲೂಕು ದ.ಕ.<br>2. ತಹಶೀಲ್ದಾರರು,<br>ಬೆಳ್ತಂಗಡಿ ತಾಲೂಕು ದ.ಕ. |

- - - - -

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136 ರನ್ವಯ ಬೆಳ್ತಂಗಡಿ ತಾಲೂಕು ಚಿಬಿದ್ರೆ ಗ್ರಾಮದ NCRCR: 73/98-99 ರಂತೆ ತಹಶೀಲ್ದಾರರು ನೀಡಿದ ಸಾಗುವಳಿ ಪತ್ರದ ಪ್ರಕಾರ MR No. H 18/12-13 ರಂತೆ ಖಾತೆ ದಾಖಲಿಸದೆ ಇರುವುದನ್ನು ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಚಿಬಿದ್ರೆ ಗ್ರಾಮದ ಸ.ನಂ. 70/1 ರ ಪೈಕಿ ವಿಸ್ತೀರ್ಣ 2.30 ಎಕ್ರೆ ಜಮೀನು ಅಕ್ರಮಣ - ಸಕ್ರಮಣದಂತೆ NCRCR: 73/98-99 ರಂತೆ ಮಂಜೂರಾಗಿ ದಿನಾಂಕ: 09-11-2012 ರಂತೆ ಹಕ್ಕುಪತ್ರ ನೀಡಿರುತ್ತಾರೆ. ಸದ್ರಿ ಸಾಗುವಳಿ ಪತ್ರದಂತೆ ಖಾತಾ ಬದಲಾವಣೆ ಕೋರಿದಾಗ ಪ್ರತಿವಾದಿಗಳು MR No. H 18/12-13 ರಂತೆ ಸ.ನಂ. 70/1 ರ ಪಹಣಿ ಕಲಂ 11 ರಲ್ಲಿ ಬೆಳ್ತಂಗಡಿ ತಹಶೀಲ್ದಾರರ REF ALNDCR: 7/82-83 ರಂತೆ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ ಎಂದು ದಾಖಲಾಗಿರುವುದರಿಂದ ಪಹಣಿ ದಾಖಲಿಸಲು ನಿರಾಕರಿಸಿರುತ್ತಾರೆ. ಇದರಿಂದ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ. ವಿಳಂಬ ವಿನಾಯ್ತಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 52 ಹಾಗೂ ಲಿಮಿಟೇಶನ್ Act ಕಲಂ 5 ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರೀಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 22-12-2015 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ: 29-03-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ತನಗೆ ದರಖಾಸ್ತು ಮಂಜೂರು

ಮಾಡಲಾದ 70/1 ನೇ ಸ.ನಂ. ದಲ್ಲಿ ALNDCR: 7/82-83 ರಂತೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿಲ್ಲವೆಂದು ತಿಳಿಸುತ್ತಾ ಆದೇಶದ ನಕಲನ್ನು ಹಾಜರುಪಡಿಸಿರುತ್ತಾರೆ. ಸದ್ರಿ ಆದೇಶದಲ್ಲಿ ಸ.ನಂ. 70/1 ರ ಬಗ್ಗೆ ಯಾವುದೇ ದಾಖಲಿರುವುದಿಲ್ಲ. ALNDCR: 7/82-83 ನೇ ಆದೇಶದಂತೆ ಪಹಣಿ ದಾಖಲಿಸುವ ಸಮಯ ತಪ್ಪಿ ಈ ಸ.ನಂ. ದಲ್ಲಿನ ಕಲಂ 11 ರಲ್ಲಿ ದಾಖಲಿಸಿರುತ್ತಾರೆ. ಆದುದರಿಂದ ಪರಿಶೀಲಿಸಿ ಸೂಕ್ತ ಪರಿಹಾರ ಒದಗಿಸುವಂತೆ ಹಾಗೂ ದರಖಾಸ್ತು ಮಂಜೂರಾಗಿರುವ 2.30 ಎಕ್ರೆಗೆ ಪಹಣಿ ದಾಖಲಿಸುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರಿಗೆ ದರಖಾಸ್ತು ಮಂಜೂರು ಮಾಡುವ ಸಮಯದಲ್ಲೇ ಸ.ನಂ. 70/1 ರ ಪಹಣಿಯಲ್ಲಿ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿದೆ ಎಂಬ ದಾಖಲಾತಿ ಇರುವುದು ಕಂಡು ಬರುತ್ತದೆ. ಆದರೂ ಈ ಜಮೀನು ಅರಣ್ಯ ಜಮೀನಲ್ಲವೆಂದು ಕಡತ ತಯಾರಿಸಲಾಗಿದೆ.ಅಕ್ರಮ-ಸಕ್ರಮ ಸಮಿತಿಯಲ್ಲಿ ಅರಣ್ಯ ಇಲಾಖೆಯ ಅಭಿಪ್ರಾಯ ಪಡೆದು ಸಾಗುವಳೀ ಚೀಟಿ ನೀಡುವ ಶರ್ತವಿಧಿಸಿದ್ದು, ಮೂಲ ಮಂಜೂರಾತಿ ಕಡತ ಪರಿಶೀಲಿಸಲಾಗಿ ಅರಣ್ಯ ಅಭಿಪ್ರಾಯ ಪಡೆದಿರುವುದು ಕಂಡು ಬರುವುದಿಲ್ಲ. ಇದರಿಂದ ಅಕ್ರಮ-ಸಕ್ರಮ ಸಮಿತಿಯ ಷರತ್ತು ಉಲ್ಲಂಘಣೆ ಆಗಿರುವುದು ಸ್ಪಷ್ಟವಾಗುತ್ತದೆ. ಬೆಳ್ತಂಗಡಿ ತಾಲೂಕು ಚಿಬಿದ್ರೆ ಗ್ರಾಮದ ಸ.ನಂ. 70/1 ವಿಸ್ತೀರ್ಣ 13.41 ಎಕ್ರೆ ಜಮೀನು ಅರಣ್ಯ ಇಲಾಖೆಗೆ ವರ್ಗಾವಣೆ ಆಗುದೆಯೇ? ಎಂಬ ಕುರಿತು ದಾಖಲೆಗಳನ್ನು ಪರಿಶೀಲಿಸಿ ಅರಣ್ಯ ಇಲಾಖಾ ಅಭಿಪ್ರಾಯವನ್ನು ಪಡೆದು ಪಹಣಿ ದಾಖಲಾತಿಗೆ ಕ್ರಮ ಜರಗಿಸಬಹುದಾಗಿದೆ. ಆದ್ದರಿಂದ ಪ್ರಕರಣದಲ್ಲಿ ಈ ಕೆಳಕಂಡಂತೆ ಆದೇಶ ಮಾಡಿದೆ.

## ಆದೇಶ.

ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿದೆ.

ಬೆಳ್ತಂಗಡಿ ತಹಶೀಲ್ದಾರರ ಸಂಖ್ಯೆ: ಎನ್ ಸಿಆರ್ .ಸಿಆರ್: 73/98-99(ಚಿಬಿದ್ರೆ ಗ್ರಾಮ) ದಿನಾಂಕ:09-11-2012ರ ಆದೇಶವನ್ನು ರದ್ದುಗೊಳಿಸಿದೆ.

ಬೆಳ್ತಂಗಡಿ ತಾಲೂಕು ಚಿಬಿದ್ರೆ ಗ್ರಾಮದ ಸ.ನಂ. 70/1 ವಿಸ್ತೀರ್ಣ 13.41 ಎಕ್ರೆ ಜಮೀನು ಅರಣ್ಯ ಇಲಾಖೆಗೆ ವರ್ಗಾವಣೆ ಆಗಿದೆಯೇ? ಎಂಬುದರ ಕುರಿತು ಗ್ರಾಮ ದಾಖಲೆಗಳನ್ನು ಪರಿಶೀಲಿಸಿ, ಅರಣ್ಯ ಇಲಾಖಾ ಅಭಿಪ್ರಾಯವನ್ನು ಪಡೆದು ಜಮೀನು ಮಂಜೂರಾತಿ ಹಾಗೂ ಪಹಣಿ ದಾಖಲಿಸಲು ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ : 25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ. ರಾಜೇಂದ್ರ ಕೆ.ವಿ. ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಶಿವಯ್ಯ ಎಸ್.ಎಲ್ ಇವರ ಮುಖಾಂತರ ಜ್ಯಾರಿ.

ಪ್ರತಿ: ಕಂದಾಯ ನಿರೀಕ್ಷಕರು, ಕೊಕ್ಕಡ ಹೋಬಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಕಡತ ಸಂಖ್ಯೆ MR: 18/12-13 ಪುಟಸಂಖ್ಯೆ 1 ರಿಂದ 14 ರ ತನಕ & NCR 71/98-99, 73/98-99 ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ.